ಮನುಷ್ಯನೇ ಏರಿದ ಅತ್ಯದ್ಭುತ ಎತ್ತರ ಎಂಬುವುದನ್ನು ಅರಿತುಕೊಳ್ಳದ ವಯಸ್ಸಿನಲ್ಲಿ ಒಂದು ದಿನ ಮಾವನ ಹತ್ರ 'ಗಾಂಧಿ ಆಗುವುದು ಹೇಗೆ?' ಕೇಳಿದ್ದೆ. ಅವರು 'ಸತ್ಯವನ್ನು ಮಾತ್ರ ಹೇಳುವುದು' ಅಂದಿದ್ದರು. ಆ ಮೂಲಕ ಗಾಂಧಿಯಾಗುವುದೆಂದರೆ ಸತ್ಯ ಮಾತ್ರ ಹೇಳುವುದು ಎನ್ನುವ ಚಂದದ ಸುಳ್ಳನ್ನು ನನ್ನೊಳಗೆ ದಾಟಿಸಿಬಿಟ್ಟಿದ್ದರು. ಅವತ್ತೇ ರಾತ್ರಿ ನಾನು ಗಾಂಧಿಯಾಗುತ್ತೇನೆ ಎಂದು ತೀರ್ಮಾನಿಸಿದ್ದೆ.

ಆಮೇಲಿಂದ ಸುಳ್ಳು ಹೇಳಿಯೇ ಇಲ್ಲ ಅಂತಲ್ಲ. ಮರುದಿನ ಬೆಳಗ್ಗೆ ಕಾಪಿ ಬರೆಯದಿರಲು ನೆಪ ಹುಡುಕುವಾಗಲೇ ರಾತ್ರಿಯ ತೀರ್ಮಾನ ಮರೆತಿತ್ತು. ಆದರೆ ಪ್ರತಿ ಬಾರಿ ಸುಳ್ಳಾಡುವಾಗಲೂ ಗಾಂಧಿ ಸುಮ್ಮನೆ ಬಂದು ಗಂಟಲಲ್ಲಿ ಕೂತು ಬಿಡುತ್ತಿದ್ದರು. ಸ್ಪೆಷಲ್ ಕ್ಲಾಸಿನ ಕಾರಣ ಕೊಟ್ಟು ಡೊಂಬಯ್ಯಣ್ಣನ ಅಂಗಡಿಯಲ್ಲಿ ಕೂತು 'ಇದೊಂದೇ ಪೇಜು' ಅನ್ನುತ್ತಲೇ ಕಥೆ ಪುಸ್ತಕ ಓದಿದ್ದನ್ನು ಎರಡು ದಿನ ಕಳೆದಮೇಲಾದರೂ ಮನೆಯಲ್ಲಿ ಹೇಳಬೇಕು ಎನ್ನುವ ನೈತಿಕ ಪ್ರಜ್ಞೆಯನ್ನು ಗಾಂಧಿ ಬಿತ್ತಿದ್ದರು. ಪ್ರತಿ ರವಿವಾರ ಬೆಳಗ್ಗೆ ಮದ್ರಸಕ್ಕೆ ಹೊರಡುವ ಸಮಯದಲ್ಲಿ ಧುತ್ತನೆ ಕಾಣಿಸಿಕೊಳ್ಳುತ್ತಿದ್ದ ಹೊಟ್ಟೆನೋವು ವರ್ಷಕ್ಕೆ ಎರಡೋ ಮೂರೋ ಬಾರಿ ಬರುವುದಕ್ಕೆ ಸೀಮಿತವಾಯಿತು.

ಗಾಂಧಿ ದಿಢೀರೆಂದು ಬಾಪು ಆದದ್ದಲ್ಲ. ಅದೊಂದು ನಿರಂತರ ಪ್ರಕ್ರಿಯೆ, ನೋಟಿನಲ್ಲಿ, ಪುಸ್ತಕದಲ್ಲಿರುವ ಗಾಂಧಿ ಎಲ್ಲರ ಮನೆಯ ಬಾಪು ಆದದ್ದು ಕೆಲವು ಚಂದದ ರೂಪಕಗಳ ಮೂಲಕ. ಮೂರು ಮಂಗಗಳ ಮೂಲಕ ಎಷ್ಟು ಸರಳವಾಗಿ ಕೆಟ್ಟದ್ದನ್ನು ನೋಡಬಾರದು, ಕೇಳಬಾರದು, ಹೇಳಬಾರದು ಎಂದರು! ನಾನು ಮತ್ತು ಈ ದೇಶದ ಲಕ್ಷಾಂತರ ಮಕ್ಕಳು ಗಾಂಧಿಯನ್ನು ಅರಿತುಕೊಂಡದ್ದೇ ಮನಸ್ಸಲ್ಲಿ ಸದಾ ಹಸಿರಾಗಿರುವ ಇಂತಹ ರೂಪಕಗಳಿಂದ.

ಹಟವಾದಿ ಗಾಂಧೀಜಿಯದು ಸರಳ ಬದುಕು. ಒಂದು ತುಂಡು ಬಟ್ಟೆ ಧರಿಸಿಕೊಂಡೇ ಅತಿದೊಡ್ಡ ಸಾಮ್ರಾಜ್ಯಶಾಹಿಯನ್ನು ಎದುರು ಹಾಕಿಕೊಳ್ಳಬಹುದು ಎನ್ನುವುದನ್ನೂ ಜಗತ್ತಿಗೇ ತೋರಿಸಿಕೊಟ್ಟರು. ಆ ಬಟ್ಟೆ ಈ ದೇಶದ ಬಡತನದ ಪ್ರತೀಕವೋ ಅಥವಾ ಬದುಕಿನ ಸರಳತೆಯೋ ಎನ್ನುವುದೆಲ್ಲಾ ವಿಚಾರ ಮಾಡುವುದಕ್ಕೆ ಮುನ್ನವೇ ಅವರ ಉಡುಪಿನ ಸರಳತೆ ಮನಸ್ಸಿಗಂಟಿಕೊಂಡು ಕೂತು ಬಿಟ್ಟಿತು. ಒಮ್ಮೆ ಮಾವನ ಬಳಿ ಮಾತಾಡುತ್ತಾ 'ಐದು ವರ್ಷಗಳ ಒಂದಿಡೀ ಎಂಜಿನಿಯರ್ ಪದವಿಯನ್ನು ಎರಡೇ ಜೊತೆ ಬಟ್ಟೆಗಳಲ್ಲಿ ಹೇಗೆ ಕಳೆದಿರಿ?' ಎಂದು ನಾನು ಇಷ್ಟಿಷ್ಟು ದೊಡ್ಡ ಕಣ್ಣು ಬಿಟ್ಟು ಕೇಳಿದ್ದಾಗ ಅವರು, 'ಗಾಂಧಿ ಅಷ್ಟನ್ನೂ ಉಡುತ್ತಿರಲಿಲ್ಲವಲ್ಲಾ' ಎಂದು ತಣ್ಣಗೆ ಉತ್ತರಿಸಿದ್ದರು. ಬಹುಶಃ ಗಾಂಧೀಜಿ ಬಳಸುತ್ತಿದ್ದ ರೂಪಕಗಳು ಹೀಗೆಯೇ ಏನೋ, ಅಂಗೈಗೆ ಅಂಟಿಕೊಂಡು ಸದಾ ಆತ್ಮವನ್ನು ಎಚ್ಚರಗೊಳಿಸುವಂಥದ್ದು!

'ಮೈ ಎಕ್ಸ್‌ಪೆರಿಮೆಂಟ್ ವಿಥ್ ಟ್ರೂಥ್'ನಲ್ಲಿ ಗಾಂಧೀಜಿ, 'ನಿಮ್ಮ ಕೆಲಸವನ್ನು ನೀವೇ ಮಾಡಿಕೊಳ್ಳಬೇಕು' ಎಂದಿದ್ದಾರೆ. ನನ್ನ ಬದುಕಿನಲ್ಲಿ ತುಂಬಾ ಪ್ರಭಾವ ಬೀರಿದ ಅವರ ಮಾತು ಇದು. ಹಲವು ಬಾರಿ ನನ್ನ ಕೈಲಾಗದು ಅಂದುಕೊಂಡಿದ್ದ ಕೆಲಸವನ್ನು ಕಲಿತುಕೊಂಡ ಹೆಮ್ಮೆಯನ್ನೂ, ಇನ್ನೂ ಕೆಲವು ಬಾರಿ 'ಅಧಿಕಪ್ರಸಂಗಿ' ಎನ್ನುವ ಬಿರುದನ್ನೂ ನನಗದು ನೀಡಿದೆ.

ಮತ್ತೊಂದು ಕಡೆ ಅವರು 'ಸಹಜೀವಿಗಳನ್ನು ಅವರ ದೌರ್ಬಲ್ಯಗಳನ್ನು ಒಪ್ಪಿಕೊಂಡು ಸ್ವೀಕರಿಸಬೇಕು' ಎನ್ನುತ್ತಾರೆ. ಬದುಕು ಸಹ್ಯವಾಗುವುದಕ್ಕೆ, ಚೆಂದಗಾಣುವುದಕ್ಕೆ ಎಷ್ಟು ಸರಳ ಸೂತ್ರವದು! ಸಹಜೀವಿಗಳ ದೌರ್ಬಲ್ಯವನ್ನು ಸುಮ್ಮನೆ ಸ್ವೀಕರಿಸಿಬಿಟ್ಟರೆ ಅನಗತ್ಯ ವಾದ, ವಿವಾದ, ಜಗಳಗಳು ಇಲ್ಲದೆ ಸಂಬಂಧಗಳಲ್ಲಿ ಗೋಜಲುಗಳೇ ಇಲ್ಲವಾಗಿ ಬದುಕೂ ಸರಳವಾಗುತ್ತದೆ.

ಬಾಲ್ಯದಲ್ಲಿ ಗೊತ್ತಿದ್ದೋ ಗೊತ್ತಿಲ್ಲದೆಯೋ ಎಸಗಿದ ತಪ್ಪುಗಳಿಂದ ಹಿಡಿದು ಸ್ವಾತಂತ್ರ್ಯ ಹೋರಾಟದಲ್ಲಿ ಇಡೀ ದೇಶಕ್ಕೆ ನೇತೃತ್ವ ಒದಗಿಸುವಲ್ಲಿ ತನ್ನಿಂದಾದ ತಪ್ಪುಗಳನ್ನು ಒರೆಗಲ್ಲಿಗೆ ಹಚ್ಚುವ, ತೆರೆದಿಡುವ ಧೈರ್ಯ ಮತ್ತು ಪಾರದರ್ಶಕತೆ ಮಹಾತ್ಮನಿಗೆ ಮಾತ್ರ ಇರಲು ಸಾಧ್ಯ. ಹಾಗೆಂದೇ ಅವರು ಅಷ್ಟು ದೃಢವಾಗಿ 'ನಮ್ಮೊಳಗಿನ ನೈತಿಕತೆಯೇ ನಮ್ಮ ಬಲ' ಎಂದು ಹೇಳಲು ಸಾಧ್ಯವಾಗಿದ್ದಿರಬಹುದು.

ಗಾಂಧಿ ಬದುಕಿದ ಕಾಲಘಟ್ಟದಲ್ಲಿ ನಾನು ಇರಲಿಲ್ಲ. ಗಾಂಧಿ ಇಲ್ಲದ ನಾಡಿನಲ್ಲಿ ಎರಡು ಪೀಳಿಗೆಯ ನಂತರ ಹುಟ್ಟಿದ ನಮ್ಮಂಥವರ ಕಣ್ಣೂ ಅವರ ಸಾವು, ಎಲುಬುಗೂಡಿನ ಎದೆಯೊಳಗಿಳಿದ ಮೂರು ಕಾಡತೂಸುಗಳ ಶಬ್ದ ಕೇಳಿದಂತಾದಾಗೆಲ್ಲಾ ಹನಿಗೂಡುತ್ತವೆ ಎಂದರೆ ಇನ್ನೆಷ್ಟು ಶತಮಾನ ಕಳೆದರೂ ಮಹಾತ್ಮ ಅಜರಾಮರರಾಗಿಯೇ ಇರುತ್ತಾರೆ. ■

# ಗಾಂಧಿ: ಕಂಡಷ್ಟು, ದಕ್ಕಿದಷ್ಟು...

**ಗಾಂಧಿ ಇಂದು ನಮ್ಮ ಪಾಲಿಗೆ ಅಚ್ಚರಿ, ಸಂದೇಹ, ಮೆಚ್ಚುಗೆ, ಅನುಮಾನ ಎಲ್ಲವನ್ನೂ ಹುಟ್ಟಿಸುವ ಪುರಾಣದ ಪಾತ್ರವಿದ್ದಂತೆ. ನಾವು ಬಗೆದಷ್ಟೂ ಆಳವಾಗುವ ಅವರ ವ್ಯಕ್ತಿತ್ವ ಹಲವು ಬಗೆಯ ದೃಷ್ಟಾಂತಗಳ ಮೂಲಕ ವ್ಯಾಪಿಸುತ್ತಲೇ ಇದೆ.**



■ ಆದಿತ್ಯ ಬೀಳೂರು
ಕೃಷಿಕ–ಛಾಯಾಗ್ರಾಹಕ

ನಾವು ಶಾಲೆಯಲ್ಲಿ ಓದುತ್ತಿದ್ದಾಗ ಪಠ್ಯಪುಸ್ತಕಗಳಲ್ಲಿ ಗಾಂಧಿಯವರ ಬಗ್ಗೆ ಒಳ್ಳೆಯದನ್ನು ತಿಳಿಸುವ ಪಾಠಗಳಿದ್ದರೂ, 'ನಮ್ಮ ದೇಶದ ದುಃಸ್ಥಿತಿಗೆ ಗಾಂಧೀಜಿಯವರೇ ಕಾರಣ' ಎಂದು ಹಿರಿಯರು ಬೈಯುತ್ತಿದ್ದುದನ್ನು ಕೇಳಿದ್ದೆವು. ದೇಶ, ಸ್ವಾತಂತ್ರ್ಯ, ದುಃಸ್ಥಿತಿ ಈ ಪದಗಳ್ಯಾವುದರ ಸ್ಪಷ್ಟ ಕಲ್ಪನೆಯಿಲ್ಲದಿದ್ದರೂ ಪಾಠದಲ್ಲಿದ್ದಕ್ಕಿಂತ ಹೆಚ್ಚು ತಿಳಿದಿದ್ದೇವೆ ಎಂದು ತೋರಿಸಲೋ, ನಾವೂ ದೊಡ್ಡವರೇ ಎಂದುಕೊಳ್ಳಲೋ ನಾವೂ 'ಅವ ಎಂತ ಮಳ್ಳ್ ಗಾಂಧಿ' ಎಂದು ಬೈಯುತ್ತಿದ್ದೆವು.

ಆದರೆ ಅಚಾನಕ್ಕಾಗಿ ಯಾವತ್ತೋ ಒಂದು ದಿನ – ದೇಶದ ಮುಕ್ಕಾಲು ಪಾಲು ಜನ ಅನಕ್ಷರಸ್ಥರೇ ಇದ್ದಾಗ, ಟಿ.ವಿ., ರೇಡಿಯೊ ಹೋಗಲಿ, ವರ್ತಮಾನ ಪತ್ರಿಕೆಗಳೂ ದುರ್ಲಭವಿದ್ದ ಆ ಕಾಲದಲ್ಲಿ ಒಬ್ಬ ಮನುಷ್ಯ ಇಡಿ ದೇಶದ ಮೂಲೆ ಮೂಲೆಯನ್ನೂ ತಲುಪುತ್ತಾನೆ; 'ಊಟ ಬಿಡುತ್ತೇನೆ' ಎನ್ನುವ ಮೂಲಕ ಬ್ರಿಟಿಷರನ್ನೂ ಹೆದರಿಸುತ್ತಾನೆ; ದೇಶದ ಜನರನ್ನು ಸ್ವಾತಂತ್ರ್ಯ ಚಳವಳಿಯ ದಿಕ್ಕಿಗೆ ಹುಚ್ಚು ಹತ್ತಿಸಿ ಸೆಳೆಯುತ್ತಾನೆ ಎಂಬುದು ಮಹಾ ಅದ್ಭುತವಲ್ಲವೆ ಎನಿಸಿ ಅಚ್ಚರಿಯಾಯಿತು. ಆ ನಂತರವೂ ಗಾಂಧಿಯವರ ಬರಹಗಳನ್ನು ಓದಿದ್ದು ಕಮ್ಮಿಯೇ.

'ದೇಶದಲ್ಲಿ ಹಿಂದೂ ಮುಸ್ಲಿಂ ಭಾವೈಕ್ಯ ಸಾಧ್ಯವಾಗುವುದಾದರೆ ನಮ್ಮನ್ನು ಬ್ರಿಟಿಷರೇ ಆಳಿದರೂ ಪರವಾಗಿಲ್ಲ' ಎಂಬರ್ಥದ ಮಾತು ಹೇಳಿದರೆಂದು ಯಾವುದೋ ಪುಸ್ತಕ, ಪತ್ರಿಕೆಯಲ್ಲಿ ಬಂದ ಬಿಡಿ ಬರಹ, ಸಾಲುಗಳ ಮೂಲಕ, ಇಲ್ಲಿಯ ಇಂತಹ ದೇವಳದಲ್ಲಿ ಹರಿಜನರಿಗೆ ಪ್ರವೇಶ ದೊರೆತಿದ್ದು ಗಾಂಧಿಯವರು ಆ ಊರಿಗೆ ಬಂದಾಗ ತೋರಿದ ಅಸಮಾಧಾನದ ಕಾರಣ ಎಂಬಂಥ ಬಿಡಿ ಘಟನೆಗಳ ಮೂಲಕ, ಗದ್ದಾರ್ ಸಿನಿಮಾದ ದೇಶ ವಿಭಜನೆಯ ಕಾಲದ ಹಿಂದೂಗಳ ಹೆಣ ತುಂಬಿದ ರೈಲಿನ, 'ನಾನೇಕೆ ಗಾಂಧಿಯನ್ನು ಕೊಂದೆ?' ಎಂಬ ಗೋಡ್ಸೆಯ ಪುಸ್ತಕದ